ಮನಿಗೆ ಯಾವಾಗ ಹೋದರಿ? ಮುಂಜಾನೆ ರವ್ಯಾನ ಮನಿಗೆ ಹೊಂಟೇನಿ ಅಂತ ಹೇಳಿದ್ರಲ್ಲಾ? ಇದು ನನ್ನ ಪ್ರಶ್ನೆ. ಹೌದು ಮುಂಜಾನೆ ರವ್ಯಾನ ಕಡೆ ಹೋದೆ. ಆಮೇಲೆ ಮಧ್ಯಾಹ್ನ ಶೇಕ್ಯಾನ ಫೋನು ಬಂತು ಆವಾಗ ಇಲ್ಲಿಗೆ ಬಂದೆ. ಇದು ಉತ್ತರ. ಅಲ್ಲಿಗೆ ನನ್ನ ದೂರವಾಣಿ ಸ್ತಬ್ಧವಾಗುತ್ತದೆ. ಏಕೆಂದರೆ ಛಬ್ಬಿ ಎನ್ನುವ ನಮ್ಮೂರ ಡಾಕ್ಟರನ ಕಡೆಗೆ ಹೋದವರು ಅಷ್ಟು ಬೇಗ ಡಿಸ್ಚಾರ್ಜ್ ಆಗುವುದಿಲ್ಲ. 'ನೋಡೋಣ ತಡಿರಿ, ಇನ್ನೂ ಒಬ್ಸರ್ವ್ ಮಾಡಬೇಕು, ಸ್ಟೇಬಲ್ ಆಗಬೇಕು' ಅಂತ ಹೇಳುತ್ತ, ಐಸಿಯು ಒಳಗೆ, ಅಲ್ಲಿಂದ ವಾರ್ಡಿಗೆ ಹೀಗೆ ಬೇರೆ ಬೇರೆ ಕಡೆ ಮಲಗಿಸುತ್ತ, ಅದೂ ಇದೂ ಟೆಸ್ಟ್ ಮಾಡಿಸುತ್ತ ಒಂದು ವಾರ ಎಳೆಯುತ್ತಾನೆ. ಅಷ್ಟರಲ್ಲಿ ರೋಗಿಯ ಮನೆಯವರ ಆರ್ಥಿಕ ಸ್ಥಿತಿ ಸ್ಟೇಬಲ್ ಇದ್ದಿದ್ದು ಜೋಕಾಲಿ ಆಡಲಾರಂಭಿಸಿರುತ್ತದೆ. ಅವರು ರೋಗಿಗೆ, 'ನೀ ಈಗ ಆರಾಮಾಗಿ ಮನಿಗೆ ಹೋದರೆ ಪೂರಾ ಆರಾಮಾಗ್ತಿ ಬಾ' ಎಂದು ದುಂಬಾಲು ಬಿದ್ದಿರುತ್ತಾರೆ. ಅಷ್ಟೇ ಅಲ್ಲ ಆತ ಆರಾಮಾಗಿದ್ದಾನೆ ಎಂದು ನಂಬಿಕೆ ಬರುವಂತಹ ಅನೇಕ ಪುರಾವೆಗಳನ್ನು ಎದುರು ಹಿಡಿಯುತ್ತಾರೆ. 'ನೋಡು ಇವತ್ತು ಜ್ಯೂಸು ಕುಡಿಸು ಅಂತ ನೀನೇ ಕೇಳಿದಿ. ನಿನ್ನೆ ಅರ್ಧಲೋಟ ಗಂಜಿಗೆ ಸಾಕು ಎಂದಿದ್ದಿ ಇವತ್ತು ಪೂರಾ ಕುಡದಿ. ಮನಿಗೆ ಹೋಗೋಣು. ಅಲ್ಲಿ ಬಿಸಿ ರೊಟ್ಟಿ ವಾಸನಿಗೆ ನಿಂಗೆ ಹಶಿವಿ ಅಕ್ಕೇತಿ' ಅಂತೆಲ್ಲ ಬಗೆಬಗೆಯಿಂದ ಪುಸಲಾಯಿಸಿ ಬಿಲ್ಲಿಂಗ್

